ಸಿ.ಮಿಸ್ **516/2019**
ಪಿ. ಡಬ್ಲ್ಯೂ ಃ **01**

**<u>ಸಾಕ್ಷಿಗೆ ದಿನಾಂಕ 24.11.2025 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು ಃಎದುರುದಾರರ ಪರ ವಕೀಲರಿಂದ</u>**

1 ನೇ ಎದುರುದಾರರು ಈಗ ಎಲ್ಲಿದ್ದಾರೆ ನನಗೆ ಗೊತ್ತಿಲ್ಲ. ಎದುರುದಾರರ ಆದಾಯದಿಂದ ಅವರ ಸಂಬಳದಲ್ಲಿ ಕಡಿತಗೊಂಡು ನನ್ನ ಖಾತೆಗೆ ಹಣ ಬರುತ್ತಿದೆ ಎಂದರೆ ಸರಿಯಲ್ಲ ಸಾಕ್ಷಿ ಮೊದಲು ಬರುತ್ತಿತ್ತು ಈಗ ಬರುತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಎದುರುದಾರರು 27 ಸಾವಿರ ಮಾತ್ರ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಎದುರುದಾರರು ಎಲ್ಲಿ ಕೆಲಸ ಮಾಡುತ್ತಿದ್ದಾರೆ ನನಗೆ ನೆನಪಿಲ್ಲ. 1 ನೇ ಎದುರುದಾರರು ಕೆಲಸ ಮಾಡುತ್ತಿರುವ ಸ್ಥಳಕ್ಕೆ ನಾನು, ನನ್ನ ಅಣ್ಣತಮ್ಮಂದಿರು ಹಾಗೂ ತಂದೆ ತಾಯಿಯವರು ಹೋಗಿರುತ್ತೇವೆ. 1 ನೇ ಎದುರುದಾರರು ಕೆಲಸ ಮಾಡುತ್ತಿದ್ದ ಸ್ಥಳಕ್ಕೆ ಹೋಗಿ ಮೇಲಾಧಿಕಾರಿಗಳಿಗೆ ದೂರು ಕೊಟ್ಟು ಅವರ ಮೇಲೆ ಗಲಾಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ನನ್ನ ಅಣ್ಣ ತಮ್ಮಂದಿರು 1 ನೇ ಎದುರುದಾರರ ಮೇಲೆ ಹಲ್ಲೆ ಮಾಡಿ ತೀವ್ರ ಸ್ವರೂಪದ ಗಾಯ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಎದುರುದಾರರು ನನ್ನ ಹಾಗೂ ನನ್ನ ಅಣ್ಣತಮ್ಮಂದಿರ ವಿರುದ್ಧ ಠಾಣೆಯಲ್ಲಿ ದೂರು ನೀಡಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣ ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ. 1 ನೇ ಎದುರುದಾರರು ನಮ್ಮ ವಿರುದ್ಧ ದೂರು ನೀಡಿದ್ದರಿಂದ ನಾನು ಎದುರುದಾರರ ವಿರುದ್ಧ ವರದಕ್ಷಿಣೆ ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ ಸಾಕ್ಷಿ ಮೊದಲು

ನಾನು ದೂರು ದಾಖಲು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಯಾವಾಗ ಎದುರುದಾರರ ವಿರುದ್ಧ ಪ್ರಕರಣ ದಾಖಲು ಮಾಡಿರುತ್ತೇನೆ ನೆನಪಿಲ್ಲ. ಎದುರುದಾರರು ದೂರು ದಾಖಲು ಮಾಡಿದ 2 ದಿನಗಳ ನಂತರ ಎದುರುದಾರರ ವಿರುದ್ಧ ನಾನು ಪ್ರಕರಣ ದಾಖಲು ಮಾಡಿರುತ್ತೇನೆ ಸರಿಯಲ್ಲ.

ನಾನು ಈಗ ರತ್ನಾಪುರಿಯ ನನ್ನ ತಂದೆ ಮನೆಯಲ್ಲಿ ವಾಸವಿದ್ದೇನೆ. ರತ್ನಾಪುರಿಯಲ್ಲಿ ವಾಸವಿದ್ದ ಬಗ್ಗೆ ಆಧಾರ ಕಾರ್ಡ ಇರುತ್ತದೆ. ಮದುವೆ ಪೂರ್ವದಲ್ಲಿ ಆಧಾರ ಕಾರ್ಡ ಎಂದರೆ ಸಾಕ್ಷಿ ಮದುವೆ ನಂತರ ಬದಲಾಗಿರುತ್ತದೆ ಎಂದು ನುಡಿಯುತ್ತಾರೆ. ಆಧಾರ ಕಾರ್ಡ ಹಾಜರುಪಡಿಸಿಲ್ಲ ಹಾಜರುಪಡಿಸುತ್ತೇನೆ. ಎರಡು ವರ್ಷಗಳ ಹಿಂದೆ ಆಧಾರ ಕಾರ್ಡ ಬದಲಾಯಿಸಿರುತ್ತೇನೆ. 1 ನೇ ಎದುರುದಾರರು ನನ್ನನ್ನು ಜೊತೆಗೆ ಕರೆದುಕೊಂಡು ಹೋಗುತ್ತೇನೆ ಎಂದು ನ್ಯಾಯ ಪಂಚಾಯಿತಿ ಮಾಡಿದರು ಸಹ ನಾನು ಹೋಗದೇ ಆಧಾರ ಕಾರ್ಡ ಬದಾಲಯಿಸಿ ವಿಳಾಸ ಬದಾಲಯಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೈಸೂರಿನಲ್ಲಿ ವಾಸವಿದ್ದೇನೆ ರತ್ನಾಪುರಿಯಲ್ಲಿ ವಾಸವಿಲ್ಲ ಎಂದರೆ ಸರಿಯಲ್ಲ. ನನ್ನ ಹತ್ತಿರ ದ್ವಿಚಕ್ರ ವಾಹನ ಇದೆ ಎಂದರೆ ಸಾಕ್ಷಿ ಮೊದಲು ಇತ್ತು ಈಗ ಇಲ್ಲ ಎಂದು ನುಡಿಯುತ್ತಾರೆ. ಆರ್.ಸಿ ಮಾಡಿಸುವಾಗ ಹೊಸ ಪೆಂಜೆಳ್ಳಿ ವಿಳಾಸ ಕೊಟ್ಟಿರುತ್ತೇನೆ. ದ್ವಿಚಕ್ರ ವಾಹನವನ್ನು 1 ನೇ ಎದುರದಾರರು ನನಗೆ ಕೊಡಸಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಕೊಡಿಸಿರುತ್ತಾರೆ. ನನ್ನ ತಂದೆ ಕೊಡಸಿದ ಬಗ್ಗೆ ದಾಖಲೆ

ಇಲ್ಲ ಭಾವಚಿತ್ರ ಇದೆ. ದ್ವಿಚಕ್ರ ವಾಹನವನ್ನು 1 ನೇ ಎದುರುದಾರರು ಕೊಡಸಿರುತ್ತಾರೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದ್ವಿಚಕ್ರ ವಾಹನದಲ್ಲಿ ನಾನು ಬೇರೆ ಒಬ್ಬ ವ್ಯಕ್ತಿಯೆಂದಿಗೆ ಹೋಗುತ್ತಿದ್ದಾಗ ಹೆಲ್ಮೇಟ್ ಹಾಕಿಲ್ಲ ಎಂದು ನನಗೆ ನೊಟೀಸ ಬಂದಿರುತ್ತದೆ ಎಂದರೆ ಸರಿಯಲ್ಲ. ನಾನು ಬೇರೆ ಪುರುಷರೊಂದಿಗೆ ಓಡಾಡುತ್ತಿದ್ದೇನೆ ಎಂದು 1 ನೇ ಎದುರುದಾರರು ಜೊತೆಗೆ ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿದರು ಸಹ ನಾನು ಉದ್ದೇಶಪೂರ್ವಕವಾಗಿ ಹೋಗಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ನಾನು ನನ್ನ ತಮ್ಮಂದಿರ ಜೊತೆ ಓಡಾಡುತ್ತೇನೆ ಎಂದು ನುಡಿಯುತ್ತಾರೆ. 1 ನೇ ಎದುರುದಾರರು ಮಕ್ಕಳನ್ನು ಶಾಲೆಗೆ ಸೇರಿಸಿ ಒಳ್ಳೆಯ ವಿದ್ಯಾಭ್ಯಾಸ ಕೊಡಿಸುತ್ತೇನೆ ಎಂದು ಹೇಳಿದರು ಸಹ ನಾನು ಅವಕಾಶ ಮಾಡಿ ಕೊಡುತ್ತಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರು ಸರ್ಕಾರಿ ಕೆಲಸದಲ್ಲಿರುವುದರಿಂದ ಅವರಿಂದ ಹೆಚ್ಚಿನ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ14.03.2021 ರಂದು ಎದುರುದಾರರ ವಿರುದ್ಧ ಮಹಿಳಾ ಪೋಲೀಸ್ ಠಾಣೆಯಲ್ಲಿ ಸುಳ್ಳು ದೂರು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ನನ್ನನ್ನು ಹಾಗೂ ಮಕ್ಕಳನ್ನು ಚೆನ್ನಾಗಿ ನೋಡಿಕೊಳುಳತ್ತಿದ್ದರು ಭದ್ರಾವತಿಯಲ್ಲಿ ಕೆಲಸ ಮಾಡುತ್ತಿದ್ದಾಗ ನನ್ನನ್ನುಕರೆದರು ನಾನು ಅಲ್ಲಿಗೆ ಹೋಗದೇ ಗಲಾಟೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರೊಂದಿಗೆ ನಾನು

ಭದ್ರಾವತಿಯಲ್ಲಿ ಹೋಗಿ ವಾಸವಿದ್ದರೆ ನನಗೆ ಮೈಸೂರಿನಲ್ಲಿ ಹಾಗೂ ಇಷ್ಟಪಟ್ಟ ಜಾಗಗಳಿಗೆ ಸ್ವತಂತ್ರವಾಗಿ ಓಡಾಡಲು ಆಗುವುದಿಲ್ಲ ಎಂದು ಸುಳ್ಳು ಅರ್ಜಿ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ಹುಣಸೂರಿನಲ್ಲಿ ಮನೆ ಮಾಡಿದ್ದರು ಆಗ ನಾನು ನನ್ನ ಅಣ್ಣತಮ್ಮಂದಿರು ಸೇರಿ 1 ನೇ ಎದುರುದಾರರಿಗೆ ಹಲ್ಲೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರಿಗೆ ನಾವು ಹಲ್ಲೆ ಮಾಡಿರುವುದರಿಂದ ತೀವ್ರ ಸ್ವರೂಪದ ಗಾಯವಾಗಿ ಮಾನಸಿಕವಾಗಿ ನೊಂದು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರಿಗೆ ಬರುವ ಸಂಬಳವನ್ನು ನಾನು ತೆಗೆದುಕೊಂಡು ಮಾನಸಿಕವಾಗಿ ಹಿಂಸೆ ನೀಡುತ್ತಿದ್ದೇನು ಎಂದರೆ ಸರಿಯಲ್ಲ.

ನನ್ನ ಆಸ್ತಿ ಹಾಗೂ ಜವಬ್ಧಾರಿ ತಖ್ತೇಯನ್ನು ಘೋಷಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ಹಾಜರುಪಡಿಸಿದರೆ ಸತ್ಯ ಗೊತ್ತಾಗುತ್ತದೆ ಎಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಮೈಸೂರಿನಲ್ಲಿ ಗಾರ್ಮೆಂಟ್ ಫ್ಯಾಕ್ಟರಿನಲ್ಲಿ ಕೆಲಸ ಮಾಡಿ ತಿಂಗಳಿಗೆ 25 ಸಾವಿರ ಸಂಬಳ ಬರುತ್ತದೆ ಎಂದರೆ ಸರಿಯಲ್ಲ. 1 ನೇ ಎದುರುದಾರರಿಗೆ 15 ಲಕ್ಷ ಆದಾಯವಿರುತ್ತದೆ ಎಂದು ತೋರಿಸಲು ಪಿಹಣಿ ಪತ್ರಿಕೆ ಹಾಗೂ ಸ್ಯಾಲರಿ ಸ್ಲಿಪ್ ನ್ನು ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿದ ದಾಖಲೆಗಳನ್ನು ಹೊರತುಪಡಿಸಿ ಬೇರೆ ದಾಖಲೆಗಳು ಇಲ್ಲ. 15 ಲಕ್ಷ ಆದಾಯ ಬರುತ್ತದೆ ಎಂದು ದಾಖಲೆ ಹಾಜರುಪಡಿಸಿಲ್ಲ 1 ಎಕರೆ ಜಮೀನಿಗೆ ಸಂಬಂಧಿಸಿದಂತೆ ಪಹಣಿ ಪತ್ರಿಕೆ

ಹಾಜರುಪಡಿಸಿರುತ್ತೇನೆ. 1 ನೇ ಎದುರುದಾರರಿಗೆ 94,170/- ಆದಾಯ ಬರುತ್ತದ ಎಂದು ತೋರಿಸಲು ನಿಪಿ-9 ನ್ನು ಹಾಜರುಪಡಿಸಿರುತ್ತೇನೆ. 1 ನೇ ಎದುರುದಾರರಿಗೆ 94,170/- ಬರುತ್ತದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರು ಈಗ ಕೆಲಸ ಮಾಡುವುದಿಲ್ಲ ಅವರಿಗೆ ಯಾವುದೇ ಆದಾಯ ಇಲ್ಲ ಎಂದರೆ ಸರಿಯಲ್ಲ. ನಿಪಿ-5 ರಿಂದ 7, 29 ರಿಂದ 32 ರಶೀದಿಯಂತೆ 1 ನೇ ಎದುರುದಾರರು ಹಣ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ 1 ನೇ ಎದುರುದಾರರು ಶುಲ್ಕ ಭರಿಸುತ್ತಾರೆ ಎಂದರೆ ಸರಿಯಲ್ಲ, ನನ್ನ ತಂದೆ ಹಾಗೂ ಅಣ್ಣತಮ್ಮಂದಿರು ಕೊಡುತ್ತಾರೆ ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ. 1 ನೇ ಎದುರುದಾರರು ಶಾಲಾ ಶುಲ್ಕ ಪಾವತಿ ಮಾಡಿದ್ದರು ಸಹ ನನ್ನ ತಂದೆ ಹಾಗೂ ಅಣ್ಣ ತಮ್ಮಂದಿರು ಮಾಡುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ 1 ನೇ ಎದುರುದಾರರೊಂದಿಗೆ ಜೀವನ ಮಾಡಲು ಇಷ್ಟ ಇಲ್ಲದೇ ಉದ್ದೇಶ ಪೂರ್ವಕವಾಗಿ ಅವರನ್ನು ಬಿಟ್ಟು ಬಂದು ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮಕ್ಕಳ ವಿದ್ಯಾಭ್ಯಾಸಕ್ಕೆ ಹಾಗೂ 1 ನೇ ಎದುರುದಾರರಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 1 ನೇ ಎದುರುರಾರಿಂದ ಪರಿಹಾರ ಪಡೆಯಲು ಅರ್ಹರಳಲ್ಲ ಎಂದರೆ ಸರಿಯಲ್ಲ.

ಎದುರುದಾರರು ನನಗೆ ತೊಂದರೆ ಕೊಡುತ್ತಿದ್ದರು ಎಂದು ಹೇಳಿದ್ದು ಅದನ್ನು ನೋಡಿದವರು ಯಾರು ಇಲ್ಲ.

**ಮರು ವಿಚಾರಣೆ ಇಲ್ಲ.**

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಸಾ.ಓ.ಹೇ.ಸ.ಒ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ**
**ಹುಣಸೂರು.**